## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 641 |
| ಸದಸ್ಯರ ಹೆಸರು | : ಶ್ರೀಮತಿ ಹೇಮಲತಾ ನಾಯಕ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : 20.02.2024 |
| ಉತ್ತರಿಸುವವರು | : ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಗಣಿ ಭಾದಿತ ಪ್ರದೇಶಗಳ ಅಭಿವೃದ್ಧಿಗಾಗಿ ಇಲ್ಲಿಯವರೆಗೆ ಸಂಗ್ರಹವಾಗಿರುವ ಅನುದಾನವೆಷ್ಟು; ಸದರಿ ಅನುದಾನ ಯಾವ ಯಾವ ಜಿಲ್ಲೆಗಳ ಅಭಿವೃದ್ಧಿಗೆ ಬಳಸಲು ಅವಕಾಶವಿದೆ; | ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ, ರಾಜ್ಯ ಸರ್ಕಾರ ಬಳ್ಳಾರಿ, ವಿಜಯನಗರ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿನ ಗಣಿಗಾರಿಕೆಯಿಂದ ಬಾಧಿತವಾದ ಪ್ರದೇಶಗಳ ಪರಿಸರ ಪುಃಶ್ಚೇತನಕ್ಕಾಗಿ ನಾಲ್ಕು ಜಿಲ್ಲೆಗಳ ವಿವಿಧ ಇಲಾಖೆಗಳು ಕೈಗೊಳ್ಳಲು ಉದ್ದೇಶಿಸಿರುವ ಅಭಿವೃದ್ಧಿ ಚಟುವಟಿಕೆಗಳನ್ನು ಗುರುತಿಸಿ ಸರ್ಕಾರದ ಮಟ್ಟದಲ್ಲಿ ಕ್ರೊಡೀಕರಿಸಿ ಸಮಗ್ರ ಗಣಿ ಪರಿಸರ ಪುನ:ಶ್ಚೇತನ ಅಭಿವೃದ್ಧಿ (CEPMIZ) ಯೋಜನೆಯನ್ನು ತಯಾರಿಸಿ, ಅಕ್ಟೋಬರ್ 2018 ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಕ್ಕೆ ಸಲ್ಲಿಸಲಾಗಿತ್ತು. ಅದರಂತೆ ಘನ ನ್ಯಾಯಾಲಯ 21.04.2022 ರಂದು ಹೊರಡಿಸಿದ ಆದೇಶದಲ್ಲಿ ಈ ಯೋಜನೆಗೆ ತಾತ್ವಿಕ ಅನುಮೋದನೆ ನೀಡಿರುತ್ತದೆ.<br><br>ಈ ಯೋಜನೆಗೆ ಅವಶ್ಯವಿರುವ ಹಣವನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ರಚಿಸಲಾಗಿರುವ Monitoring Committee ಗಣಿಗಾರಿಕೆಯ ವಿವಿಧ ಮೂಲಗಳಿಂದ ದಿನಾಂಕ:31.01.2024 ರವರೆಗೆ ₹.24,568.73 ಕೋಟಿ ಮೊತ್ತವನ್ನು ಸಂಗ್ರಹಿಸಿ KMERC ಗೆ ವರ್ಗಾವಣೆ ಮಾಡಿರುತ್ತದೆ. ಸದರಿ ಅನುದಾನವು ಬಳ್ಳಾರಿ, ಚಿತ್ರದುರ್ಗ, ತುಮಕೂರು ಮತ್ತು ವಿಜಯನಗರ ಜಿಲ್ಲೆಗಳ ಅಭಿವೃದ್ಧಿಗೆ ಬಳಸಲು ಅವಕಾಶವಿದೆ.<br><br>ಮುಂದುವರೆದು, ಗಣಿ ಬಾಧಿತ ಪ್ರದೇಶಗಳ ಅಭಿವೃದ್ಧಿ ಹಾಗೂ ಜನರ ಕಲ್ಯಾಣಕ್ಕಾಗಿ ಜಿಲ್ಲಾ ಖನಿಜ ಪ್ರತಿಷ್ಠಾನ ಎಂಬ ಲಾಭರಹಿತ ಟ್ರಸ್ಟ್ ಎಲ್ಲಾ 31 ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿದೆ, ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ (ಡಿಎಂಎಫ್ ಟಿ) ಅಡಿ 2015-16ನೇ ಸಾಲಿನಿಂದ 2023-24 (ಡಿಸೆಬಂರ್ 2024) ರ ಅಂತ್ಯದವರೆಗೆ ₹.4586.74 ಕೋಟಿ ಮೊತ್ತ ಸಂಗ್ರಹಿಸಲಾಗಿರುತ್ತದೆ. ಆಯಾ ಜಿಲ್ಲೆಗಳಲ್ಲಿ ಸಂಗ್ರಹಿಸಿದ ಡಿಎಂಎಫ್ ಮೊತ್ತವನ್ನು ಆಯಾ ಜಿಲ್ಲೆಯಲ್ಲಿಯೇ ಗಣಿ ಭಾದಿತ ಪ್ರದೇಶಗಳ ಅಭಿವೃದ್ಧಿ ಹಾಗೂ ಜನರ ಕಲ್ಯಾಣ ಕಾರ್ಯಗಳಿಗೆ ಬಳಸಲು ಅವಕಾಶ ಕಲ್ಪಿಸಲಾಗಿರುತ್ತದೆ. |

| | | |
|---|---|---|
| ಆ) | ಇಲ್ಲಿಯವರೆಗೆ ಸದರಿ ಅನುದಾನವನ್ನು ಖರ್ಚು ಮಾಡಲಾಗಿದೆಯೇ? ಹಾಗಿದ್ದಲ್ಲಿ ಕ್ರಿಯಾ ಯೋಜನೆಯ ವಿವರ ನೀಡುವುದು. | ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ:21.04.2022ರ ಆದೇಶದನ್ವಯ ಮಾನ್ಯ ಮೇಲ್ವಿಚಾರಣಾ ಪ್ರಾಧಿಕಾರ ರವರು ಈ ವರೆಗೆ 13 ಸಭೆಗಳನ್ನು ನಡೆಸಿ ಒಟ್ಟು ₹.7634.97 ಕೋಟಿ ಅಂದಾಜು ಮೊತ್ತದ 317 ಪ್ರಸ್ತಾವನೆಗಳಿಗೆ ಅನುಮೋದನೆ ನೀಡಿರುತ್ತದೆ.<br><br>ಈ ಯೋಜನೆಗಳ Detailed Project Report ತಯಾರಿಕೆ ಸೇರಿದಂತೆ ಯೋಜನಾವೆಚ್ಚ ರೂ.25.50 ಕೋಟಿ ಮೊತ್ತವನ್ನು KMERC ಸಂಸ್ಥೆಯ ವತಿಯಿಂದ ವಿವಿಧ ಇಲಾಖೆಗಳಿಗೆ ಬಿಡುಗಡೆ ಮಾಡಿರುತ್ತದೆ. ವಿವರಗಳನ್ನು ಅನುಬಂಧ–1 ರಲ್ಲಿ ಒದಗಿಸಿದೆ.<br><br>ಮುಂದುವರೆದು, ಸಂಬಂಧಿಸಿದ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಗಳಿಂದ ಅನುಮೋದಿಸಿದ ಕ್ರಿಯಾ ಯೋಜನೆ ಹಾಗೂ ಖರ್ಚಾದ ಮೊತ್ತದ ಜಿಲ್ಲಾವಾರು ವಿವರ ಅನುಬಂಧ -2ರಲ್ಲಿ ಒದಗಿಸಿದೆ. |
| ಇ) | ಸದರಿ ಅನುದಾನವನ್ನು ಯಾವ ಯಾವ ಕಾಮಗಾರಿಗಳಿಗೆ ಬಳಸಬಹುದೆಂದು ಸುಪ್ರೀಂ ಕೋರ್ಟ್ ಸೂಚಿಸಿದೆ ಅದರಂತೆ ಕ್ರಿಯಾ ಯೋಜನೆ ತಯಾರಿಸಲಾಗಿದೆಯೇ? (ವಿವರ ನೀಡುವುದು) | ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ, ರಾಜ್ಯ ಸರ್ಕಾರ ಬಳ್ಳಾರಿ, ವಿಜಯನಗರ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿನ ಗಣಿಗಾರಿಕೆಯಿಂದ ಬಾಧಿತವಾದ ಪ್ರದೇಶಗಳ ಸಾಮಾಜಿಕ ಆರ್ಥಿಕ ಮತ್ತು ಪರಿಸರ ಅಭಿವೃದ್ಧಿಗೆ ಪೂರಕವಾದ ಪರಿಸರ ಪುನಃಶ್ಚೇತನ ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳು, ಕುಡಿಯುವ ನೀರು ಮತ್ತು ನೈರ್ಮಲ್ಯ, ಗ್ರಾಮೀಣ ರಸ್ತೆಗಳು, ಆರೋಗ್ಯ, ಶಿಕ್ಷಣ, ದುರ್ಬಲ ವರ್ಗಗಳ ಅಭಿವೃದ್ಧಿ, ವಸತಿ, ಕೌಶಲ್ಯಾಭಿವೃದ್ಧಿ, ಪ್ರವಾಸೋದ್ಯಮ, ನೀರಾವರಿ ಮೂಲಭೂತ ಸೌಕರ್ಯ (Physical Infrastructure), ರಸ್ತೆ ಮತ್ತು ಸಾರಿಗೆ ರೈಲ್ವೆ ಮೂಲಭೂತ ಸೌಕರ್ಯ ಮುಂತಾದ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಯೋಜನೆಯ ಉದ್ದೇಶವಾಗಿರುತ್ತದೆ.<br><br>ಅದರಂತೆ ನಾಲ್ಕು ಜಿಲ್ಲೆಗಳ ವಿವಿಧ ಇಲಾಖೆಗಳು ಕೈಗೊಳ್ಳಲು ಉದ್ದೇಶಿಸಿರುವ ಅಭಿವೃದ್ಧಿ ಚಟುವಟಿಕೆಗಳನ್ನು ಗುರುತಿಸಿ ಸರ್ಕಾರದ ಮಟ್ಟದಲ್ಲಿ ಕ್ರೂಡೀಕರಿಸಿ ಒಟ್ಟು ₹.24,996.71 ಕೋಟಿ ಅಂದಾಜು ಮೊತ್ತದ Comprehensive Environmental Plan for Mining Impact Zone (CEPMIZ) ಎಂಬ ಕ್ರಿಯಯೋಜನೆಯನ್ನು ತಯಾರಿಸಲಾಗಿದೆ. 2018 ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಕ್ಕೆ ಸಲ್ಲಿಸಲಾಗಿದ್ದು, ಘನ ನ್ಯಾಯಾಲಯ 21.04.2022 ರಂದು ಹೊರಡಿಸಿದ ಆದೇಶದಲ್ಲಿ ಈ ಯೋಜನೆಗೆ ತಾತ್ವಿಕ ಅನುಮೋದನೆ ನೀಡಿರುತ್ತದೆ. ಯೋಜನೆಯ ಜಿಲ್ಲಾವಾರು ಮತ್ತು ಇಲಾಖಾವಾರು ತಃಖ್ತೆ ಅನುಬಂಧ -3 ರಲ್ಲಿ ಒದಗಿಸಲಾಗಿದೆ. |

| | | |
|---|---|---|
| ಈ) | ಸದರಿ ಅನುದಾನವನ್ನು ಯಾವ ಕಾಲಮಿತಿಯೊಳಗೆ ಖರ್ಚು ಮಾಡಲು ಉದ್ದೇಶಿಸಲಾಗಿದೆ; (ವಿವರ ನೀಡುವುದು) | Comprehensive Environment Plans for the Mining Impact Zone" (CPEMIZ) ಯೋಜನೆಗಳನ್ನು 10 ವರ್ಷಗಳ ಕಾಲಮಿತಿಯೊಳಗೆ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. |
| ಉ) | ಈ ಅನುದಾನವನ್ನು ತ್ವರಿತಗತಿಯಲ್ಲಿ ಹಾಗೂ ಕ್ರಿಯಾಶೀಲವಾಗಿ ಖರ್ಚು ಮಾಡಲು ಮತ್ತು ಗಣಿಬಾಧಿತ ಜಿಲ್ಲೆಗಳ ಅಭಿವೃದ್ಧಿಗೆ ಉನ್ನತ ಮಟ್ಟದ ಅನುಭವಿ ಅಧಿಕಾರಿಗಳು, ಪ್ರಗತಿಪರ ಚಿಂತಕರ ಹಾಗೂ ಜನಪ್ರತಿನಿಧಿಗಳ ಸಮಿತಿ ರಚಿಸಲು ಸಾಧ್ಯವಿಲ್ಲವೇ; ಹಾಗಿದ್ದಲ್ಲಿ ಈ ಸರ್ಕಾರ ಈ ನಿಟ್ಟಿನಲ್ಲಿ ಕ್ರಮ ವಹಿಸುವುದೇ? | ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ:21.04.2022 ಆದೇಶದಲ್ಲಿ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರನ್ನು ಮೇಲುಸ್ತುವಾರಿ ಪ್ರಾಧಿಕಾರವಾಗಿ ನೇಮಕ ಮಾಡಿ, ಯೋಜನೆಯ ಆಯ್ಕೆ, ಅನುಷ್ಠಾನ, ಪ್ರಗತಿ ಪರಿಶೀಲನೆ, ಖರ್ಚು-ವೆಚ್ಚಗಳ ಮೇಲುಸ್ತುವಾರಿಯನ್ನು ಅವರಿಗೆ ವಹಿಸಿರುತ್ತದೆ. Comprehensive Environment Plans for the Mining Impact Zone" (CPEMIZ) ಯೋಜನೆಯ ಅನುಷ್ಠಾನವನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯ ಆದೇಶದಂತೆ ಮೇಲುಸ್ತುವಾರಿ ಪ್ರಾಧಿಕಾರವು ನಿರ್ವಹಿಸಲಿದೆ.<br>ಮೇಲಿನ ವಿವರಗಳ ಹಿನ್ನೆಲೆಯಲ್ಲಿ ಗಣಿಬಾಧಿತ ಜಿಲ್ಲೆಗಳ ಅಭಿವೃದ್ಧಿಗೆ ಉನ್ನತ ಮಟ್ಟದ ಅನುಭವಿ ಅಧಿಕಾರಿಗಳು, ಪ್ರಗತಿಪರ ಚಿಂತಕರ ಹಾಗೂ ಜನಪ್ರತಿನಿಧಿಗಳ ಸಮಿತಿ ರಚಿಸಲು ಅವಕಾಶವಿರುವುದಿಲ್ಲ. |

**ಸಂಖ್ಯೆ: ಸಿಐ 31 ಎಂಎಂಎಂ 2024**

**(ಎಸ್.ಎಸ್. ಮಲ್ಲಿಕಾರ್ಜುನ್)**
**ಗಣಿ ಮತ್ತು ಭೂವಿಜ್ಞಾನ ಹಾಗೂ**
**ತೋಟಗಾರಿಕೆ ಸಚಿವರು**

## ಅನುಬಂಧ - ೦1

## Work undertaken & Fund released to to Implementing Agencies (Departments)

| Sl.No. | Department | Amount |
|---|---|---|
| 1 | Atal Bihari Vajapeyi Zoological Park -Kamalapura | 6,311,154 |
| 2 | Atal Bihari Vajapeyi Zoological Park -Kamalapura | 4,536,060 |
| 3 | Atal Bihari Vajapeyi Zoological Park -Kamalapura | 2,066,740 |
| 4 | Atal Bihari Vajapeyi Zoological Park -Kamalapura | 9,950,642 |
| 5 | Atal Bihari Vajapeyi Zoological Park -Kamalapura | 7,547,294 |
| 6 | GTTC | 1,936,000 |
| 7 | GTTC | 2,445,914 |
| 8 | GTTC | 138,190,160 |
| 9 | DCF-TMK | 589,153 |
| 10 | GTTC | 25,925,897 |
| 11 | GTTC | 31,482,487 |
| 12 | GTTC | 381,113 |
| 13 | Atal Bihari Vajapeyi Zoological Park -Kamalapura | 2,775,431 |
| 14 | GTTC | 20,820,218 |
| | Total | **254,958,263** |

ಅನುಬಂಧ 2

## ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಅಡಿಯಲ್ಲಿ ಸಂಗ್ರಹಿಸಿದ ಹಾಗೂ ವಿನಿಯೋಗಿಸಿದ ಮೊತ್ತದ ವಿವರ

ರೂ.ಕೋಟಿಗಳಲ್ಲಿ

| ಕ್ರ.ಸಂ | ಜಿಲ್ಲೆಯ ಹೆಸರು | 2015-16 ರಿಂದ 2023-24 (ಡಿಸೆಂಬರ್-2023) ರ ಅಂತ್ಯದವರೆಗೆ ಡಿಎಂಎಫ್ ಅಡಿಯಲ್ಲಿ ಸಂಗ್ರಹವಾದ ಮೊತ್ತ | 85% ಲಭ್ಯವಿರುವ ಮೊತ್ತ | ಒಟ್ಟು ಕಾಮಗಾರಿಗಳ ಸಂಖ್ಯೆ | ಅನುಮೋದಿತ ಕ್ರಿಯಾ ಯೋಜನೆ ಮೊತ್ತ | PMKKKY ಯೋಜನೆಗಳಿಗೆ ಖರ್ಚಾದ ಮೊತ್ತ | ಕೋವಿಡ್ -19 ವೈರಾಣು ತಡೆಗಟ್ಟಲು ಖರ್ಚಾದ ಮೊತ್ತ | ಒಟ್ಟು ಮೊತ್ತ |
|---|---|---|---|---|---|---|---|---|
| 1 | Ballari | 2264.47 | 1924.80 | 1791 | 1593.68 | 664.89 | 53.16 | 718.05 |
| 2 | Kalaburagi | 562.86 | 478.43 | 2669 | 607.23 | 138.32 | 59.51 | 197.82 |
| 3 | Chitradurga | 510.55 | 433.97 | 305 | 319.40 | 222.40 | 40.34 | 262.74 |
| 4 | Vijayanagara | 466.64 | 396.65 | 1422 | 774.70 | 451.40 | 0.00 | 451.40 |
| 5 | Bagalkote | 115.66 | 98.31 | 349 | 114.10 | 71.43 | 3.86 | 75.29 |
| 6 | Koppal | 71.11 | 60.44 | 466 | 88.91 | 41.55 | 5.43 | 46.98 |
| 7 | Chikkaballapura | 66.05 | 56.14 | 152 | 78.03 | 26.10 | 4.39 | 30.49 |
| 8 | Raichur | 66.99 | 56.94 | 179 | 70.23 | 42.13 | 3.86 | 45.99 |
| 9 | Bengaluru Urban | 55.58 | 47.24 | 607 | 76.35 | 45.98 | 4.77 | 50.75 |
| 10 | Ramanagara | 52.61 | 44.72 | 635 | 35.66 | 30.05 | 6.27 | 36.32 |
| 11 | Belagavi | 54.12 | 46.00 | 338 | 38.51 | 32.50 | 3.74 | 36.24 |
| 12 | Tumakuru | 50.11 | 42.59 | 814 | 55.74 | 41.75 | 5.64 | 47.38 |
| 13 | Bengaluru Rural | 43.75 | 37.19 | 910 | 33.96 | 24.61 | 2.63 | 27.24 |
| 14 | Chamarajanagar | 34.38 | 29.22 | 65 | 26.60 | 12.71 | 2.97 | 15.68 |
| 15 | Hassan | 23.49 | 19.97 | 353 | 13.55 | 11.91 | 0.15 | 12.06 |
| 16 | Kolar | 17.00 | 14.45 | 160 | 5.93 | 2.63 | 0.76 | 3.39 |
| 17 | Dakshina Kannada | 17.45 | 14.83 | 57 | 3.43 | 2.85 | 1.52 | 4.37 |
| 18 | Uttara Kannada | 16.42 | 13.96 | 97 | 7.62 | 6.95 | 0.44 | 7.39 |
| 19 | Chikkamagaluru | 16.42 | 13.96 | 203 | 12.33 | 8.10 | 0.00 | 8.10 |
| 20 | Udupi | 15.20 | 12.92 | 257 | 9.03 | 8.11 | 1.19 | 9.31 |
| 21 | Gadag | 11.44 | 9.72 | 103 | 6.07 | 4.88 | 0.60 | 5.48 |
| 22 | Dharwad | 10.05 | 8.54 | 133 | 7.16 | 5.39 | 1.00 | 6.39 |
| 23 | Mandya | 8.65 | 7.35 | 107 | 6.56 | 5.05 | 0.24 | 5.30 |
| 24 | Haveri | 8.69 | 7.39 | 160 | 9.18 | 2.89 | 0.94 | 3.82 |
| 25 | Davanagere | 8.21 | 6.98 | 21 | 8.27 | 5.75 | 0.16 | 5.91 |
| 26 | Vijayapura | 5.68 | 4.83 | 33 | 4.49 | 2.29 | 0.55 | 2.84 |
| 27 | Shivamogga | 3.72 | 3.16 | 21 | 1.13 | 0.80 | 0.39 | 1.19 |
| 28 | Mysuru | 3.36 | 2.86 | 8 | 1.77 | 0.44 | 0.23 | 0.67 |
| 29 | Bidar | 2.58 | 2.19 | 9 | 0.48 | 0.00 | 0.10 | 0.10 |
| 30 | Kodagu | 1.81 | 1.54 | 17 | 0.73 | 0.49 | 0.20 | 0.69 |
| 31 | Yadgir | 1.69 | 1.44 | 11 | 0.37 | 0.31 | 0.00 | 0.31 |
| | ಒಟ್ಟು ಮೊತ್ತ | 4586.74 | 3898.73 | 12452 | 4011.18 | 1914.67 | 205.04 | 2119.71 |

H.C.l...
ನಿರ್ದೇಶಕರು

ಅನುಬಂಧ-03

## CEPMIZ ಯೋಜನೆಯ ಶೀರ್ಷಿಕೆವಾರು ಅಂದಾಜಿನ ವಿವರ

| ಕ್ರಮ ಸಂಖ್ಯೆ | ವಲಯಗಳು / ಉಪವಲಯಗಳು. (Sectors & Sub-Sectors) | ಬಳ್ಳಾರಿ | ಚಿತ್ರದುರ್ಗ | ತುಮಕೂರು | ಒಟ್ಟು ಮೊತ್ತ ರೂ. ಕೋಟಿಗಳು |
|---|---|---|---|---|---|
| 1 | ಪರಿಸರ ಪುನ:ಸ್ಥಾಪನೆ | | | | |
| a | ಅರಣ್ಯ | 1,557.79 | 540.83 | 500.52 | **2,599.14** |
| b | ಪರಿಸರ ಮಾಲಿನ್ಯ | 27.00 | 14.81 | 14.81 | **56.61** |
| | ಒಟ್ಟು | **1,584.79** | **555.64** | **515.33** | **2,655.75** |
| 2 | ಕೃಷಿ ಮತ್ತು ಇತರೆ | | | | |
| a | ಕೃಷಿ | 442.45 | 324.85 | 287.10 | **1,054.40** |
| b | ತೋಟಗಾರಿಕೆ | 64.73 | 17.06 | 14.03 | **95.82** |
| c | ರೇಷ್ಮೆ | 0.00 | 3.50 | 3.00 | **6.50** |
| d | ಪಶು ಸಂಗೋಪನೆ | 284.76 | 38.00 | 22.20 | **344.96** |
| e | ಮೀನುಗಾರಿಕೆ | 89.99 | 7.63 | 3.75 | **101.37** |
| | ಒಟ್ಟು | **8,81.93** | **391.04** | **330.08** | **1,603.05** |
| 3 | ಕುಡಿಯುವ ನೀರು/ನೈರ್ಮಲ್ಯ ಮತ್ತು ಗ್ರಾಮೀಣ ರಸ್ತೆಗಳು | | | | |
| a | ಕುಡಿಯುವ ನೀರು | 2569.98 | 661.00 | 236.88 | **3,467.86** |
| b | ನೈರ್ಮಲ್ಯ | 374.00 | 37.00 | 13.00 | **424.00** |
| c | ಗ್ರಾಮೀಣ ರಸ್ತೆಗಳು | 520.72 | 280.68 | 236.64 | **1,038.04** |
| | ಒಟ್ಟು | **3,464.70** | **978.68** | **486.52** | **4,929.90** |
| 4 | ಆರೋಗ್ಯ | | | | |
| a | ಜಿಲ್ಲಾ ಆಸ್ಪತ್ರೆ | 286.17 | 114.04 | 131.90 | **532.11** |
| b | ತಾಲ್ಲೂಕ/ಸಿ.ಹೆಚ್ಸಿ/ಪಿ.ಹಚ್.ಸಿ/ ಆಯುಷ್/ರಕ್ತ ನಿಧಿ. ಇತರೆ | 151.17 | 141.90 | 77.77 | **370.84** |
| c | ವಿಶೇಷ ಆರೋಗ್ಯ ಕೇಂದ್ರ, ಸಂಡೂರು | 301.63 | | | **301.63** |
| d | ಮೆಡಿಕಲ್ ಕಾಲೇಜು, ಬಳ್ಳಾರಿ | 711.20 | 0 | 0 | **711.20** |
| | ಒಟ್ಟು | **1,450.17** | **255.94** | **209.67** | **1,915.78** |
| 5 | ಶಿಕ್ಷಣ | | | | |
| a | ಶಿಕ್ಷಣ | 413.49 | 280.58 | 186.62 | **880.69** |
| b | ಪದವಿ ಪೂರ್ವ ಶಿಕ್ಷಣ | 230.00 | 50.00 | 5.66 | **285.66** |
| | ಒಟ್ಟು | 643.49 | 330.58 | 192.28 | 1,166.35 |
| 6 | ದುರ್ಬಲ ವರ್ಗಗಳ ಅಭಿವೃದ್ಧಿ | | | | |
| a | ಮಹಿಳಾ ಮತ್ತು ಮಕ್ಕಳ ಕಲ್ಯಾಣ | 398.87 | 94.03 | 110.78 | **603.68** |
| b | ಸಮಾಜ ಕಲ್ಯಾಣ | 200.00 | 50.00 | 51.94 | **301.94** |

## CEPMIZ ಯೋಜನೆಯ ಶೀರ್ಷಿಕೆವಾರು ಅಂದಾಜಿನ ವಿವರ

| ಕ್ರಮ ಸಂಖ್ಯೆ | ವಲಯಗಳು / ಉಪವಲಯಗಳು. (Sectors & Sub-Sectors) | ಬಳ್ಳಾರಿ | ಚಿತ್ರದುರ್ಗ | ತುಮಕೂರು | ಒಟ್ಟು ಮೊತ್ತ ರೂ. ಕೋಟಿಗಳು |
|---|---|---|---|---|---|
| c | ಹಿಂದುಳಿದ ವರ್ಗ | 78.0.3 | 25.31 | 25.00 | **128.34** |
| d | ಅಲ್ಪಸಂಖ್ಯಾತರ ಅಭಿವೃದ್ಧಿ | 18.70 | 19.20 | 10.70 | **48.60** |
| | ಒಟ್ಟು | **695.60** | **188.54** | **198.42** | **1,082.56** |
| 7 | ವಸತಿ | 1,027.00 | 106.88 | 60.00 | **1,193.88** |
| 8 | ಕೌಶಲ್ಯಾಭಿವೃದ್ಧಿ | 436.19 | 70.79 | 31.27 | **538.25** |
| 9 | ಪ್ರವಾಸೋದ್ಯಮ | 148.00 | 34.00 | 7.00 | **189.00** |
| 10 | ನೀರಾವರಿ | 799.00 | 154.70 | 53.00 | **1,006.70** |
| 11 | ಮೂಲಭೂತ ಸೌಕರ್ಯ | 734.99 | 105.29 | 44.08 | **884.36** |
| 12 | ರಸ್ತೆ ಮತ್ತು ಸಂಪರ್ಕ | 1,512.55 | 620.22 | 426.40 | **2,559.17** |
| 13 | ರೈಲು ಮೂಲ ಸೌಕರ್ಯ | | | | **5,271.96** |
| | ಒಟ್ಟು | **13,378.41** | **3,792.30** | **2,554.05** | **24,996.71** |

****